




ಬಡ್ಡಿ ಮನ್ನಾ ಅಂತ ಹೇಳುವುದು ಬೇಡ, ಏಕೆಂದರೆ ಬಡ್ಡಿಯೇ ಜಾಸ್ತಿ ಆಗಿದೆ!




ಹನ್ನೊಂದು ಮುಗಿಯಿತು, ಹನ್ನೆರಡನೇದು ಶುರುವಾಗಿದೆ, ಊಟ ನಂತರ ಕಣೇ..



ನಕ್ಕರೆ ಮುಖ್ಯಮಂತ್ರಿ ಆಗೋ ಲಕ್ಷಣ ಇದೆ ಅಂತ ಹೇಳೋಕಾಗೊಲ್ಲ; ನಗುವ ಗಂಡಸರನ್ನು ಅಳುವ ಹೆಂಗಸರನ್ನು ಜನ ನಂಬೊಲ್ಲ!



...ಮಾತೆತ್ತಿದರೆ ಆರು ಕೋಟಿ ಕನ್ನಡಿಗರ ಪರವಾಗಿ... ಅಂತಾರಲ್ಲ.. ಅದರ ಒಳಗೆ ನಾನೂ ಇದ್ದೀನಲ್ವಾ?

## ಔಷಧ

ಓರ್ವ ವಿಚಿತ್ರ ರೋಗಿ ಡಾಕ್ಟರ್ ಹತ್ತಿರ ಬಂದ. ಡಾಕ್ಟರರು ಬಂದ ಕಾರಣ ಕೇಳಿದರು.

ರೋಗಿ: ಡಾಕ್ಟ್ರೇ, ನನಗೆ ಸದಾ ಒಂದು ಕನಸು ಬೀಳುತ್ತದೆ. ಅದರಲ್ಲಿ ತುಂಡು ಬಟ್ಟೆ ಧರಿಸಿದ ಯುವತಿಯೊಬ್ಬಳು ನನ್ನ ಬೆಡ್‌ರೂಮಿನಿಂದ ಮತ್ತೊಂದು ರೂಮಿಗೆ ಓಡಿ ಹೋಗುವುದು ಕಾಣುತ್ತದೆ.

ಡಾಕ್ಟರ್: ಹೀಗೆ ಹುಡುಗಿ ಕನಸಿನಲ್ಲಿ ಬರದಂತೆ ನಿಮಗೆ ಔಷಧಿ ಕೊಡಬೇಕಲ್ಲವೆ?

ರೋಗಿ: ಅಲ್ಲ ಅಲ್ಲ ಡಾಕ್ಟರ್! ಅವಳು ಬೇರೆ ರೂಮಿಗೆ ಹೋಗಬಾರದು, ಅಂಥ ಔಷಧ ಕೊಡಿರಿ.



## ಜ್ಞಾನ

ನೀವು ಹೇಳುವುದು ತುಂಬ ನಿಜ. ಪತ್ರಿಕೆ ಓದುವುದರಿಂದ ಬಹಳಷ್ಟು ವಿಷಯಗಳು ತಿಳಿಯುತ್ತವೆ.
ಹೌದು, ಈಗ ನಿನಗೆ ಯಾವ ವಿಷಯ ಗೊತ್ತಾಯಿತು?
ಇಂದು ನಗರದಲ್ಲಿ ಆರು ಕಡೆ ಸೀರೆಗಳ 'ಸೇಲ್' ಇದೆರಿ.

## ಶುಭ ಸಂಖ್ಯೆ

ಹೆಂಡತಿ: ಹದಿಮೂರು ಸಂಖ್ಯೆ ಅಶುಭ ಎಂದು ನೀವು ಅನ್ನುತ್ತೀರಲ್ಲ; ಅದು ಹೇಗೆ?
ಗಂಡ: ಕಾರಣ ಹದಿಮೂರು ವರುಷಗಳ ಹಿಂದೆ, 13ನೇ ತಾರೀಕು ನಿನ್ನೊಂದಿಗೆ ನನ್ನ ವಿವಾಹವಾಗಿತ್ತು.

## ತಕರಾರು ವಿಭಾಗ

ರಾಮರಾವ್‌ರಿಗೆ ಅಕಸ್ಮಾತ್ ಕಿವಿ ಕೇಳುವುದು ನಿಂತು ಹೋಯಿತು. ಎದುರಿಗಿನ ಮನುಷ್ಯ ಏನು ಹೇಳುತ್ತಿದ್ದಾನೆಂಬುದೇ ತಿಳಿಯದಾಯಿತು. ಇನ್ನು ತಮ್ಮ ನೌಕರಿ ಹೋದಂತೆಯೇ ಎಂದು ಅನಿಸಿತು ಅವರಿಗೆ.

ಆದರೆ ಮನೋಹರ ಪಂತರು ರಾಮರಾವ್‌ರಿಗೆ ಧೈರ್ಯ ತುಂಬಿದರು– 'ರಾಮರಾವ್, ನೀವೇನೂ ಚಿಂತಿಸಬೇಡಿ; ಇನ್ನು ಸಾಹೇಬರು ನಿಮ್ಮನ್ನು ತಕರಾರು ವಿಭಾಗಕ್ಕೆ ವರ್ಗ ಮಾಡುತ್ತಾರೆ.'




ಸಂಗ್ರಹ: ಎ.ಎ.ಸನದಿ, ಶಿಂದೊಳ್ಳಿ